4. ಪ್ರಕಟಣೆ

ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನಪರಿಷತ್‌ನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ಈ ಕೆಳಕಂಡ 2014ನೇ ಸಾಲಿನ ವಿಧೇಯಕಗಳನ್ನು ದಿನಾಂಕ: 11.02.2015 ರಂದು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

1) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ತಿದ್ದುಪಡಿ ವಿಧೇಯಕ, 2014.

2) ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2014

ಈಗ ಮಾನ್ಯ ರಾಯರೆಡ್ಡಿಯವರು ಮತ್ತು ಇತರರು ಕೇಳಿರುವ ಪ್ರಶ್ನೆಗೆ ಮಾನ್ಯ ಮುಖ್ಯ ಮಂತ್ರಿಗಳು ನಾಳೆ ದಿವಸ ಉತ್ತರವನ್ನು ಹೇಳುವಾಗ ಈ ಪ್ರಶ್ನೆಗೂ ಸಹ ಉತ್ತರ ಹೇಳುತ್ತೇನೆಂದು ಹೇಳಿದ್ದಾರೆ. ಈಗ ಸದನವನ್ನು ಮುಂದೂಡಿ ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸೇರಲಾಗುತ್ತದೆ.

(ಸದನವು ಮಧ್ಯಾಹ್ನ 2 ಗಂಟೆ 15 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(ಸದನವು 3 ಗಂಟೆ 32 ನಿಮಿಷಕ್ಕೆ ಪ್ರಾರಂಭವಾಯಿತು ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಉಪಾಧ್ಯಕ್ಷರು:– ಈಗ ವಿಧೇಯಕಗಳನ್ನು ಮಂಡಿಸುವುದು.